# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2023-24ನೇ ಸಾಲಿನಲ್ಲಿ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ಸರ್ಕಾರದ ವಿವೇಚನಾ ನಿಧಿಯಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಬಗ್ಗೆ.

**ಓದಲಾಗಿದೆ:** 1.ಸರ್ಕಾರದ ಪತ್ರ ಸಂಖ್ಯೆ:ಪಿಡಿಎಸ್ 24 ಪಿಎಂಎಸ್ 2021, ದಿನಾಂಕ:21.04.2021.
2.ಮಾನ್ಯ ಯೋಜನಾ ಸಚಿವರ ಟಿಪ್ಪಣಿ ಸಂಖ್ಯೆ:ಯೋ&ಸಾಂ/ಸ/92/ 2024,ದಿನಾಂಕ:14.03.2024
3.ಸರ್ಕಾರದ ಆದೇಶ ಸಂ:ಪಿಡಿಎಸ್ 27 ಪಿಟಿಪಿ 2023 ದಿನಾಂಕ;21.03.2023
4.ಸರ್ಕಾರದ ಆದೇಶ ಸಂ:ಪಿಡಿಎಸ್ 101 ಪಿಟಿಪಿ 2023 ದಿನಾಂಕ;08.01.2024
5.ಸರ್ಕಾರದ ಆದೇಶ ಸಂ:ಪಿಡಿಎಸ್ 23 ಪಿಟಿಪಿ 2024 ದಿನಾಂಕ:16.03.2024

*****

**ಪ್ರಸ್ತಾವನೆ:**

2023-24ನೇ ಸಾಲಿನ ಆಯವ್ಯಯದಲ್ಲಿ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ ಲೆಕ್ಕಶೀರ್ಷಿಕೆ:4515(ಬಂಡವಾಳ/ವಿ.ಘ.ಯೋ/ಗಿ.ಉ.ಯೋ) ರಡಿ ರೂ.3950.00 ಲಕ್ಷಗಳ ಅನುದಾನ ಒದಗಿಸಲಾಗಿದೆ.

ಮೇಲೆ ಓದಲಾದ (1)ರ ಸರ್ಕಾರದ ಪತ್ರದಲ್ಲಿ 2023-24ನೇ ಸಾಲಿನ ಆಯವ್ಯಯದಲ್ಲಿ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ ಒದಗಿಸಲಾಗಿರುವ (ಬಂಡವಾಳ/ ವಿ.ಘ.ಯೋ/ ಗಿ.ಉ.ಯೋ) ಅನುದಾನದಲ್ಲಿ ಶೇ.5ರಷ್ಟನ್ನು ಸರ್ಕಾರದ ವಿವೇಚನಾ ನಿಧಿಯಡಿ ನಿಗಧಿಪಡಿಸಿ, ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರಿಂದ ಕಾಮಗಾರಿಗಳ ಪ್ರಸ್ತಾವನೆಯನ್ನು ಪಡೆದು ಅನುಷ್ಠಾನಗೊಳಿಸುವಂತೆ ತಿಳಿಸಲಾಗಿದೆ.

ಮೇಲೆ ಓದಲಾದ (2) ರ ಟಿಪ್ಪಣಿಯಲ್ಲಿ, ಮಾನ್ಯ ಯೋಜನಾ ಸಚಿವರು, 2023-24ನೇ ಸಾಲಿನ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ಸರ್ಕಾರದ ವಿವೇಚನಾ ಕೋಟಾದಡಿ ಅಭಿವೃದ್ಧಿ ಕಾಮಗಾರಿಗಳಿಗೆ ರಾಮನಗರ ಜಿಲ್ಲೆಗೆ ರೂ.45.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲು ಆದೇಶಿಸಿರುತ್ತಾರೆ.

ಮೇಲೆ ಓದಲಾದ (3) ರ ಆದೇಶದಲ್ಲಿ ಶ್ರೀ ರವಿ ಎಸ್, ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಕೈಬಿಡಲಾಗಿದೆ.

ಮೇಲೆ ಓದಲಾದ (4) ರ ಆದೇಶದಲ್ಲಿ 2022-23ನೇ ಸಾಲಿನಲ್ಲಿ ಮಂಡಳಿಯ ಕ್ರಿಯಾಯೋಜನೆಯಲ್ಲಿ ಅನುಮೋದನೆಗೊಂಡು ಅನುದಾನ ಬಿಡುಗಡೆ ಮಾಡದೆ ಪ್ರಾರಂಭವಾಗದೇ ಇರುವ ಕಾಮಗಾರಿಗಳನ್ನು ರದ್ದುಪಡಿಸಿದ್ದು, ಸದರಿ ಕಾಮಗಾರಿಗಳಲ್ಲಿ ಶ್ರೀ ರವಿ ಎಸ್, ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ಸಲ್ಲಿಸಿರುವ ಪ್ರಸ್ತಾವನೆಯಲ್ಲಿನ ವಿಶೇಷ ಘಟಕಯೋಜನೆಯಡಿ ಕ್ರಮ ಸಂಖ್ಯೆ 3 ಮತ್ತು 4ರ 2 ಕಾಮಗಾರಿಗಳನ್ನು ಮತ್ತು ಗಿರಿಜನ ಉಪಯೋಜನೆಯಲ್ಲಿ ಕ್ರಮ ಸಂಖ್ಯೆ 5ರ 1 ಕಾಮಗಾರಿಯನ್ನು ರದ್ದುಪಡಿಸಲಾಗಿರುತ್ತದೆ.

--2..,

ಮೇಲೆ ಓದಲಾದ (5) ರ ಆದೇಶದಲ್ಲಿ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ ಸರ್ಕಾರದ ವಿವೇಚನಾ ಕೋಟಾದಡಿಯಲ್ಲಿ ಬಂಡವಾಳ ವೆಚ್ಚದಡಿ ರೂ.50.00 ಲಕ್ಷಗಳ 6 ಮುಂದುವರೆದ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿರುತ್ತದೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ, ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ವ್ಯಾಪ್ತಿಗೆ ಬರುವ ರಾಮನಗರ ಜಿಲ್ಲೆಗೆ ಮಾನ್ಯ ವಿಧಾನಪರಿಷತ್ತಿನ ಸದಸ್ಯರು ಶಿಫಾರಸ್ಸು ಮಾಡಿರುವ ಒಟ್ಟು ಅಂದಾಜು ಮೊತ್ತ ರೂ.88.00 ಲಕ್ಷಗಳ 5 ಕಾಮಗಾರಿಗಳಿಗೆ ಮರು ಅನುಮೋದನೆ ನೀಡಿ ಸರ್ಕಾರದ ವಿವೇಚನಾ ಕೋಟಾದಡಿ ಮೊತ್ತ ರೂ.47.00 ಲಕ್ಷಗಳ ಅನುದಾನ ಬಿಡುಗಡೆ ಮಾಡಲು ಸರ್ಕಾರವು ಉದ್ದೇಶಿಸಿದ್ದು, ಅದರಂತೆ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ:ಪಿಡಿಎಸ್ 23 ಪಿಟಿಪಿ 2024 (ಭಾ-1), ಬೆಂಗಳೂರು, ದಿನಾಂಕ:19.07.2024**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ 2023-24ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾಗಿರುವ ರೂ.3950.00 ಲಕ್ಷಗಳ (ಬಂಡವಾಳ/ ವಿ.ಘ.ಯೋ/ ಗಿ.ಉ.ಯೋ) ಅನುದಾನದಲ್ಲಿ ಸರ್ಕಾರದ ವಿವೇಚನಾ ನಿಧಿ (GDQ)ಗೆ ಮೀಸಲಿಟ್ಟ ಅನುದಾನ ರೂ.197.50 ಲಕ್ಷಗಳಲ್ಲಿ ರೂ.47.00 (ರೂ.ನಲವತ್ತೇಳು ಲಕ್ಷಗಳು ಮಾತ್ರ) ಲಕ್ಷಗಳನ್ನು ಈ ಕೆಳಕಂಡ 5 ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಲು ಸರ್ಕಾರವು ಅನುಮೋದನೆ ನೀಡಿ ಆದೇಶಿಸಿದೆ.

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಕಾಮಗಾರಿಗಳ ವಿವರ | ಅಂದಾಜು ಮೊತ್ತ | ಸರ್ಕಾರದ ವಿವೇಚನಾ ಕೋಟಾದಡಿ ಅನುಮೋದಿಸಿರುವ ಮೊತ್ತ |
|---|---|---|---|
| 1 | ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಮಳಗಾಳು ಗ್ರಾಮದ ಸರ್ಕಾರಿ ಪ್ರಾಥಮಿಕ ಪಾಠಶಾಲೆಯ ಆವರಣದಲ್ಲಿ ನೂತನವಾಗಿ 2 ಶಾಲಾ ಕೊಠಡಿಗಳ ನಿರ್ಮಾಣ ಕಾಮಗಾರಿಗೆ. (CE) | 25.00 | 15.00 |
| 2 | ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಮಳಗಾಳು ಗ್ರಾಮದಲ್ಲಿ ನೂತನ ವ್ಯಾಯಾಮ ಶಾಲೆ ನಿರ್ಮಾಣ ಕಾಮಗಾರಿ. (CE) | 20.00 | 12.00 |
| 3 | ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಚಾಕನಹಳ್ಳಿ, ಗ್ರಾಮ ಪಂಚಾಯತಿ ವ್ಯಾಪ್ತಿಯ ಕಳವೆಕೆರೆದೊಡ್ಡಿ ಗ್ರಾಮದ ವೆಂಕಟಾಬೋವಿ ಮನೆಯಿಂದ ಲಕ್ಷ್ಮಣ ಬೋವಿ ಮನೆವರೆಗೆ ಎರಡೂ ಬದಿಗಳಲ್ಲಿ ಕಾಂಕ್ರೀಟ್ ಚರಂಡಿ ನಿರ್ಮಾಣ ಕಾಮಗಾರಿಗೆ (SCP) | 10.00 | 10.00 |

--3.,

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಕಾಮಗಾರಿಗಳ ವಿವರ | ಅಂದಾಜು ಮೊತ್ತ | ಸರ್ಕಾರದ ವಿವೇಚನಾ ಕೋಟಾದಡಿ ಅನುಮೋದಿಸಿರುವ ಮೊತ್ತ |
|---|---|---|---|
| 4 | ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಲ್ಲಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ತಾಮಸಂದ್ರ ಸರ್ಕಲ್ ಹತ್ತಿರವಿರುವ ಬೋವಿ ಕಾಲೋನಿಯ ಬಳಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ (SCP) | 28.00 | 5.00 |
| 5 | ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಗೌಡಹಳ್ಳಿ ಗ್ರಾಮದ ಕೆಂಪಮ್ಮನ ಮನೆಯಿಂದ ರಾಜು ಮನೆವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಗೆ (TSP) | 5.00 | 5.00 |
| | **ಒಟ್ಟು** | **88.00** | **47.00** |

**ಷರತ್ತುಗಳು:-**

1. ಅನುಮೋದನೆ ನೀಡಿರುವ ಕ್ರಿಯಾಯೋಜನೆಯ ಕಾಮಗಾರಿಗಳನ್ನು 2023-24ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಅನುದಾನದಲ್ಲಿ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ನಿಯಮಾನುಸಾರ ಅನುಷ್ಠಾನಗೊಳಿಸತಕ್ಕದ್ದು.
2. ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ಮಾರ್ಗಸೂಚಿಯನ್ವಯ ಕಾಮಗಾರಿಗಳನ್ನು ಕೈಗೊಳ್ಳತಕ್ಕದ್ದು.
3. SCP/TSP ಕಾಮಗಾರಿಗಳನ್ನು SCP/TSP ಕಾಯ್ದೆ 2013 ರನ್ವಯ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಸಮುದಾಯದವರ ಉಪಯೋಗವಾಗುವಂತೆ ಅನುಷ್ಠಾನಗೊಳಿಸತಕ್ಕದ್ದು.

ಈ ಆದೇಶವು ಸರ್ಕಾರವು ಆಯಾ ಸಂದರ್ಭದಲ್ಲಿ ಹೊರಡಿಸುವ ಆದೇಶ ಮತ್ತು ಸುತ್ತೋಲೆಗೆ ಒಳಪಟ್ಟಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಡಿ.ಚಂದ್ರಶೇಖರಯ್ಯ)
ನಿರ್ದೇಶಕರು
ಪ್ರದೇಶಾಭಿವೃದ್ಧಿ ಮಂಡಳಿ ವಿಭಾಗ
ಯೋಜನೆ,ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ

**ಇವರಿಗೆ,**

1. ಪ್ರಧಾನ ಮಹಾಲೇಖಪಾಲರು, (ಲೆಕ್ಕ ಪತ್ರ)/(ಲೆಕ್ಕ ಪರಿಶೋಧನಾ ಮತ್ತು 1&2, ಕರ್ನಾಟಕ, ಬೆಂಗಳೂರು.

2. ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
3. ಕಾರ್ಯದರ್ಶಿ, ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ, ಮೈದಾನ್ ಮಹಲ್, ರಸ್ತೆ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.
4. ಸರ್ಕಾರದ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿ,
5. ಶಾಖಾಧಿಕಾರಿ, ಸ್ಕೀಮರ ಶಾಖೆ, ಯೋಜನಾ ಇಲಾಖೆ. (ಕಾಂಪೆಂಡಿಯಮ್ ಗೋಸ್ಕರ)
6. ಶಾಖಾರಕ್ಷಾ ಕಡತ/ಹೆಚ್ಚುವರಿ ಪ್ರತಿ

*****